# ಕರ್ನಾಟಕ ವಿಧಾನ ಪರಿಷತ್ತು

1. ಮಾನ್ಯ ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 610(647)
3. ಉತ್ತರಿಸಬೇಕಾದ ದಿನಾಂಕ : 17.12.2021
4. ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಿರಿಯ ಇಂಜಿನಿಯರ್‌ಗಳಿಗೆ ಸಹಾಯಕ ಇಂಜಿನಿಯರ್-1 ಬಡ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ಅವಕಾಶದ ಅನುಸಾರ ಬಿ.ಇ. ವಿದ್ಯಾರ್ಹತೆ ಹೊಂದಿದ ಕಿರಿಯ ಇಂಜಿನಿಯರ್ ಗಳಿಗೆ ಜೇಷ್ಠತೆಯ ಅನುಸಾರ ಸಹಾಯಕ ಇಂಜಿನಿಯರ್-1 ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| (ಆ) | ಹಾಗಾದಲ್ಲಿ ಸಹಾಯಕ ಇಂಜಿನಿಯರ್-1 ಎಷ್ಟು ಹುದ್ದೆಗಳು ಖಾಲಿ ಇವೆ ಅವುಗಳಲ್ಲಿ ನೇರ ನೇಮಕಾತಿ ಹಾಗೂ ಬಡ್ತಿಗೆ ಮೀಸಲಿಟ್ಟ ಹುದ್ದೆಗಳೆಷ್ಟು; (ಪೂರ್ಣ ವಿವರ ನೀಡುವುದು) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಒಟ್ಟು 205 ಸಹಾಯಕ ಇಂಜಿನಿಯರ್-1 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಹಾಲಿ 75 ಹುದೆಗಳು ಖಾಲಿ ಇರುತ್ತವೆ. ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಈ ಹುದ್ದೆಗಳ ಪೈಕಿ ಶೇ. 75ರಷ್ಟು ನೇರ ನೇಮಕಾತಿಗೆ ಮತ್ತು ಶೇ. 25ರಷ್ಟು ಬಿ.ಇ. ವಿದ್ಯಾರ್ಹತೆ ಹೊಂದಿದ ಕಿರಿಯ ಇಂಜಿನಿಯರ್ ಗಳಿಗೆ ಮುಂಬಡ್ತಿ ಮೂಲಕ ತುಂಬಲು ಅವಕಾಶವಿರುತ್ತದೆ.<br><br>ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯಲ್ಲಿ ಒಟ್ಟು 394 ಸಹಾಯಕ ಇಂಜಿನಿಯರ್-ಗ್ರೇಡ್-1 ಹುದ್ದೆಗಳು |

| | | |
|---|---|---|
| | | ಮಂಜೂರು ಆಗಿರುತ್ತವೆ. ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸ ಲಾಗಿದೆ. ಈ ಪೈಕಿ 188 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ. |

..2



| | | |
|---|---|---|
| (ಇ) | ಹಾಗಿದ್ದಲ್ಲಿ, ಸಹಾಯಕ ಇಂಜಿನಿಯರ್-1 ಬಡ್ತಿಗೆ ಬಿ.ಇ. ಪದವಿ ಪಡೆದ ಅರ್ಹರಾಗಿರುವ ನೌಕರರ ಸಂಖ್ಯೆ ಎಷ್ಟು; (ಪಟ್ಟಿಯೊಂದಿಗೆ ಪೂರ್ಣ ಮಾಹಿತಿ ನೀಡುವುದು) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಬಿ.ಇ. ವಿದ್ಯಾರ್ಹತೆ ಹೊಂದಿರುವ ಕಿರಿಯ ಇಂಜಿನಿಯರ್‌ಗಳಿಗೆ ಮಾಹಿತಿಯನ್ನು ನೀಡಲು ತಿಳಿಸಲಾಗಿದ್ದು, ಇನ್ನು ಸಂಪೂರ್ಣ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಮಾಹಿತಿ ಬಂದ ನಂತರ ಈ ದಿಸೆಯಲ್ಲಿ ಕ್ರಮ ವಹಿಸಲಾಗುವುದು. |
| (ಈ) | ಹಾಗಾದಲ್ಲಿ, ಸದ್ಯ ನೇರ ನೇಮಕಾತಿ ಪ್ರಕ್ರಿಯೆ ಇಲ್ಲದಿರುವುದರಿಂದ ಬಡ್ತಿ ಮೂಲಕವೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮಕೈಗೊಳ್ಳುವುದೇ? (ಮಾಹಿತಿ ನೀಡುವುದು) | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶದ ಅನುಸಾರ ನೇರ ನೇಮಕಾತಿ ಮತ್ತು ಮುಂಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |

ಗ್ರಾಅಪ 137 ಜಡ್‌ಪಿಎ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು